"ಈಗ ಲಾಸ್ಟ್ ಮಿನಿಟಿನಲ್ಲಿ ಏನೂ ಮಾಡೋಕಾಗೊಲ್ಲ. ಈ ಸಲ ಅಲೋ ಮಾಡ್ತೀನಿ. ಆದರೆ, ಮುಂದಿನ ಸಾರಿ ಹೆಚ್ಚುವರಿ ಶುಲ್ಕ ಕೊಡಬೇಕಾಗುತ್ತೆ."

ಆತನೇ ಮುಂದುವರಿದು ಹೇಳಿದಾಗ ದೇವರಾಜು ತಲೆಯಾಡಿಸಿ ಒಪ್ಪಿಗೆ ಸೂಚಿಸಿದರು.

ಬ್ಯಾಗೇಜ್ ಚೆಕ್ ಇನ್ ಮುಗಿದು, ಬೋರ್ಡಿಂಗ್ ಪಾಸ್ ಕೈಗೆ ಬಂದಾಗ ದೇವರಾಜು, ಅವನಿಗೆ ಹಸ್ತ ಲಾಘವ ಮಾಡಿ ಧನ್ಯವಾದ ಹೇಳಿದರು. ಬೋರ್ಡಿಂಗ್ ಪಾಸ್ ಕೈಯಲ್ಲಿ ಹಿಡಿದು ಹಣೆಯ ಬೆವರನ್ನು ಒರೆಸಿಕೊಳ್ಳುತ್ತಾ ಎಮಿಗ್ರೇಶನ್ ಕೌಂಟರಿನತ್ತ ಧಾವಿಸಿದರು. ವಿಮಾನ ತಪ್ಪಿ ಹೋಗುತ್ತದೆ ಎನ್ನುವ ಆತಂಕ ಈಗ ಕಮ್ಮಿಯಾಗಿತ್ತು. ಎದೆಬಡಿತ ಮಾತ್ರ ಇನ್ನೂ ಕಮ್ಮಿಯಾಗಿರಲಿಲ್ಲ!

ಈ ಎಲ್ಲಾ ಗೊಂದಲ ಇವತ್ತೇ ಆಗಬೇಕೆ? ಅಲ್ಲಿಯವರೆಗೂ ಎಲ್ಲ ವ್ಯವಸ್ಥಿತವಾಗಿಯೇ ನಡೆದಿತ್ತು. ಕೊನೆಯ ದಿನ, ವಾಪಸ್ಸು ಸ್ವದೇಶಕ್ಕೆ ಮರಳುವ ದಿನ, ದೇವರಾಜು ಕಂಪೆನಿ ಸರಬರಾಜು ಮಾಡಿದ್ದ ಮಷಿನ್ನು ತಾಂತ್ರಿಕ ದೋಷ ತೋರಿಸಿತು. ಅದನ್ನು ಹುಡುಕಿ, ವಿಶ್ಲೇಷಿಸಿ, ಗ್ರಾಹಕ ಕಂಪೆನಿಯ ಮನಸ್ಸಿಗೆ ಒಪ್ಪುವಂತೆ ಸರಿಪಡಿಸಿ ಹೋಟೆಲಿಗೆ ಬರುವುದರಲ್ಲಿ ಫ್ಲೈಟಿಗೆ ತಡವಾಗಿತ್ತು. ಆತುರದಲ್ಲಿ ಸಾಮಾನುಗಳನ್ನು ತುಂಬಿಕೊಂಡು ಏರ್‌ಪೋರ್ಟಿಗೆ ಬಂದಾಗ ಚೆಕ್ ಇನ್‌ಗೆ ಇನ್ನು ಅರ್ಧ ಗಂಟೆ ಮಾತ್ರ ಬಾಕಿ. ಆ ಬೃಹತ್ ವಿಮಾನ ನಿಲ್ದಾಣದಲ್ಲಿ ಏರ್‌ಲೈನ್ಸ್ ಕೌಂಟರ್ ಹುಡುಕಿ ಅಲ್ಲಿಗೆ ತಲುಪುವುದಕ್ಕೆ ಹದಿನೈದೇ ನಿಮಿಷ ಉಳಿದಿತ್ತು. ಅಂತೂ ಹೇಗೋ ಆಯಿತಲ್ಲ ಎಂಬ ಸಮಾಧಾನದಲ್ಲಿ ದೇವರಾಜು ನಿಟ್ಟುಸಿರಿಟ್ಟರು.

ಎಮಿಗ್ರೇಶನ್ ಬೇಗನೆ ಮುಗಿಯಿತು. ಟರ್ಮಿನಲ್ ಬಳಿ ಬಂದಾಗ ಆಗಲೇ ವಿಮಾನದೊಳಗೆ ಎಲ್ಲ ಪ್ರಯಾಣಿಕರು ಹೋಗಿಯಾಗಿತ್ತು. ದೇವರಾಜು ಕೊನೆಯ ಪ್ರಯಾಣಿಕ. ಅವರು ಒಳಗೆ ಹೋಗುತ್ತಲೇ ಬೋರ್ಡಿಂಗ್ ಟರ್ಮಿನಲ್ ಮುಚ್ಚಿದರು.

"ಸಾರಿ, ಐಯಾಮ್ ಲೇಟ್."

ಗಗನಸಖಿಯ ಕ್ಷಮೆ ಯಾಚಿಸಿದರು ದೇವರಾಜು.

"ಚಿಂತೆಯಿಲ್ಲ ಸಾರ್. ನಿಮ್ಮ ಸೀಟು ಮೂರನೆಯ ಸಾಲಿನಲ್ಲಿದೆ. ಅದೊಂದೇ ಖಾಲಿ ಇರುವುದು."

ಆಕೆ ನಗುಮುಖದಿಂದ ಹೇಳಿದಾಗ ದೇವರಾಜುಗೆ ಭಾರತ ತಲುಪುವುದು ಖಚಿತವಾಯಿತು. ಸೀಟಿನಲ್ಲಿ ಕುಳಿತೊಡನೆಯೇ ಹಾಯೆನಿಸಿತು. ಅಂತೂ ಎಲ್ಲಾ ತಾಪತ್ರಯಗಳೂ ಕೊನೆಯಾಯಿತು ಎಂದು ಸಮಾಧಾನದಿಂದ ದೀರ್ಘ ಶ್ವಾಸ ತೆಗೆದುಕೊಂಡರು!

"ಮಹನೀಯರೆ ಮತ್ತು ಮಹಿಳೆಯರೆ, ನಿಮಗೆ ಏರ್‌ಲೈನ್ಸ್ ಮತ್ತು ಸಿಬ್ಬಂದಿಯ ಪರವಾಗಿ ಸ್ವಾಗತ. ನಾನು ಕ್ಯಾಪ್ಟನ್ ಆ್ಯಂಡ್ರೂಸ್. ಇನ್ನು ಕೆಲವೇ ನಿಮಿಷಗಳಲ್ಲಿ ವಿಮಾನ ಟೇಕ್ ಆಫ್ ಆಗಲಿದೆ. ಬೆಂಗಳೂರಿನ ಪ್ರಯಾಣದ ಒಟ್ಟು ಸಮಯ..." ಧ್ವನಿವರ್ಧಕದ ಪ್ರಸಾರ ಕೇಳುತ್ತಿದ್ದಂತೆ ದೇವರಾಜುಗೆ ಜರ್ಮನಿಯಲ್ಲಿ ಕಳೆದ ದಿನಗಳ ಅನುಭವ ಮನಸ್ಸಿನಲ್ಲಿ ರೂಪುಗೊಳ್ಳತೊಡಗಿತು. ಸರಿಯಾಗಿ ಮೂರು ತಿಂಗಳ ಹಿಂದೆ ಇದೇ ವಿಮಾನನಿಲ್ದಾಣದಲ್ಲಿ ಕಾಲಿಟ್ಟಿದ್ದು ನೆನಪಾಯಿತು.

ಮೊದಲನೆಯ ಸಲ ಫ್ರಾಂಕ್‌ಫರ್ಟ್ ನಿಲ್ದಾಣದಲ್ಲಿ ಕಾಲಿಟ್ಟಿದ್ದ ದೇವರಾಜು ಮನಸ್ಸಿನಲ್ಲಿ ಆತಂಕವಿತ್ತು. ಅದೇ ಮೊದಲನೆಯ ಸಲ ಅವರು ವಿದೇಶವೊಂದಕ್ಕೆ ಭೇಟಿ ಕೊಟ್ಟಿದ್ದು. ನಿಲ್ದಾಣದ ಹೊರಗೆ 'ಮಿ. ದೇವರಾಜು' ಎಂಬ ಫಲಕ ಹಿಡಿದಿದ್ದ ವ್ಯಕ್ತಿಯನ್ನು